ಮುಚ್ಚಿಕೊಂಡು ಹರಿಕಥೆ ಕೇಳಿದಂಗ ಕೇಳಿ, ಕೊನಿಗೆ ಏನೂ ಹೇಳದೆ ಮುಸುಮುಸು ನಗುತ್ತಲೇ ಮಲಿಗಿದ. ಇಷ್ಟೆಲ್ಲ ಹೇಳಿದಮ್ಯಾಲ ಶೇಕ್ರಗ ಒಟ್ಟ ನಿದ್ದೀನೇ ಬರಲಿಲ್ಲ. ಹಂಗ ಬಾಳಹೊತ್ತು ಕಣ್ಣು ನೆಟ್ಟಿಸಿಕೊಂಡೇ ಮಲಗಿದ. ಒಟ್ಟ ನಿದ್ದೆ ಬರಲಿಲ್ಲ. ಮತ್ತೆ ಬೆಂಗಳೂರಾಗಿನವು ನೆಪ್ಪಾಗತೊಡಗಿದ್ವು. 'ಬೆಂಗಳೂರಾಗ ಪಿಂಜಿ ಎಷ್ಟು ಚೆಂದ ಹೊಂದಿಕೆಂದು ಇದ್ದಲ. ಹಗಲೆಲ್ಲ ಕಂಪನ್ಯಾಗ ದುಡುದು ಬರತಿದ್ದೆ. ಎಷ್ಟೋಸಲ ನನ್ ಜತಿಗೆ ನಕ್ಕಂತ ಇರುತಿದ್ಲು. ಯವಗಾರ ಕೇಳು ತಲಿತುಂಬ ಶ್ಯಾವಂತಿಗಿ ಹೂ ಮುಡುಕೊಂಡು ಇರುತಿದ್ಲು. ಅಲ್ಲಿದ್ದಾಗ ಊಟ, ಎಲಿಡಿಕಿ, ನಿದ್ದೆಂತ ಯಾರ್ ಕಿರಿಕಿರಿಲ್ದ ಕೋಣ್ಯಾಗ ಚೆಂದ ಇದ್ವಿ. ರಾತ್ರಿ ಆದಾಗ ಸೀದಾ ಅಲ್ಲಿಗೆ ಕೈ ಹಾಕಿದ್ರ ಬೆಚ್ಚಗ ಕೋಳಿ ತತ್ತಿಮ್ಯಾಲ ಕೈ ಹಾಕಿದಂಗ ಆಗುತಿತ್ತು. ಅಲ್ಲಿ ಎಷ್ಟು ಜಳಜಳ. ಕೈಗೆ, ಮೈಗೆ ಕಾವಾಗಿ ಹಂಗ ಒಮ್ಮಿಗೆ ಸ್ಟೇಜಿಗೆ ಬಂದು ಬಿಡುತಿತ್ತು. ಈಗ ಅವ್ಯಾವು ಇಲ್ಲ. ಯಾವಗಾರ ಕೇಳು ಇಲ್ಲಿಗೆ ಬಂದಮೇಲೆ ಒಬ್ರಿಗೊಬ್ರು ಮಾರಿ ಮೂರ್‌ಕಡೆ ಮಾಡಿ ಮಾರಿ ಉರುಕೋತ ಮನಿತುಂಬಾ ಓಡ್ಯಾಡೋದೆ ಆಗ್ಯಾದ. ಮನ್ಯಾಗ ನೆಮ್ಮದಿ ಅಂಬೋದೇ ಇಲ್ದಂಗ ಆಗೈತಿ...' ಅಂತ ಶೇಕ್ರ ಕಣ್ಣು ಮುಚ್ಚಲಾ ಬ್ಯಾಡಂತ ಗಟ್ಟಿಗೆ ಮುಚ್ಚಿದ. ಕಣ್ಣಿಂದ ಒಂದನಿ ತೇಲಿತು.

ಬೆಳಕು ಹರಿಲಾಕ ತಾಸು ಇತ್ತೇನೋ ಎದ್ದು ಮನಿಕಡೆ ಹೋದ. ಆಗಲೇ ಕಳ್‌ದ್ಯಾವ ಹೆಣ್‌ಮಕ್ಳು ದಡ್ಡಿ ಕೂಡೋ ಜಾಗದಾಗ ಲೈಟ್ ಹಕ್ಕೆಂದು ಕೆಮ್ಮಿಕಂತ ಕೂತಿದ್ದು ಕಾಣುತಿತ್ತು. ಕಳ್‌ದ್ಯಾವಗ ಎಗ್ರಿ ಒದಿಬೇಕನಿಸ್ತು. ಮುಂಜಾಲೆ ಮುಂಜಾಲೆ ಯಾಕ್ ಕಿರಿಕಿರೆಂತ ಮನ್ಯಾಕ ಹೋದ. ಪಿಂಜಿ ಎದ್ದಾಸಿಗಲೆ ಮಾವಗ ಬ್ಯಾಡ್ರ ನಾಯಿಗೆ ಸುಟ್ಟಂಗ ದಪ್‌ದಪ್ಪ ರೊಟ್ಟಿ ಸುಡಾಕ ಕೂತಿದ್ಲು. ಪಿಂಜಿಯ ಗಂಟುಮಾರಿ ನೋಡಿದ.

'ದಡ್ಡಿಗೆ ಹೋಗಿ ಬಂದೇನು...' ಅಂತ ಕೇಳಿದ.

ಇಲ್ಲ ಅಂದ್ಲು.

'ಕತ್ಲ ಇರತಿಗೆ ಹೋಗಬೇಕಿಲ್ಲ...' ಅಂದ.

'ಮೂರ್ ಗಂಟಿಲಾಸಿ ಕಳ್‌ದ್ಯಾವ ಹೆಂಗ್ಸರ ಕೆಂಪ್‌ಕುಂಡಿ ನೋಡಕಂತಲೇ ಲೈಟ್ ಹಕ್ಕೆಂದು ಕುಂತಾನ.. ಅವನ್‌ಮುಂದ ನಂದೆಲ್ಲ ಕಾಣಿಸಿಕೋತ ಕುಂದ್ರಿಲೇನು..' ಅಂತ ಮತ್ತಷ್ಟು ಸೌಂಡ್‌ಮಾಡಿ ರೊಟ್ಟಿ ಸುಡಾಕ ಮುಂದಾದ್ಲು.

ಶೇಕ್ರ ಇದನ್ನೆಲ್ಲ ಕೇಳಿಸಿಕೊಳ್ಳಲಾರದ ಆಕಡೆ ಕಳ್‌ದ್ಯಾವನ ಒದಿಲಾರದ, ಈಕಡೆ ರಾಗಪ್ಪನ ಸರಿ ದಾರಿಗೆ ತರಲಾರದ ಶಿವಾ... ಶಿವಾ... ಎಂದು ಮನೆಮಠ ತ್ಯಜಿಸಿದವನಂಗ ಎರೆಕಡೆ ಹೋದಾತ ತಾಸು, ಎರಡು ತಾಸಿನತನ ಮನೆಕಡೆ ಬರಲೇ ಇಲ್ಲ.

ಬೆಳಕು ಹರದು ಒಬ್ರಿಗೊಬ್ರು ಮನುಷ್ಯರು ಕಾಣುವಂಗ ನಿಚ್ಚಳದಾಗ ಮನಿಗೆ ಬಂದ. ಮನೆ ಮುಂದಿದ್ದ ಜಂಗ್ ಹತ್ತಿದ ಮಂಚ ಇನ್ನಾ ಖಾಲಿ ಆಗಿರಲಿಲ್ಲ. ಮಂಚಕ ಇಷ್ಟಗಲ ಕೂತ ರಾಗಪ್ಪ ಐದಾರು ರೊಟ್ಟಿ, ಬದ್ನಿಕಾಯಿ ಪಲ್ಯ ಹಚ್ಚಿಕೊಂಡು ಗಬಗಬ ತಿನ್ನೋದು ಒಮ್ಮಿಗೆ ನೋಡಿದ ಶೇಕ್ರಗ ಹಸುವು ಅಂಬೋದೇ ಹೊಟ್ಟ್ಯಾಗ ಹುಟ್ಟಲಿಲ್ಲ. ಮಗ ಬಂದಿದ್ದು ರಾಗಪ್ಪಗ ಕಬರು ಇರಲಿಲ್ಲ. ಹಂಗ ತಿನ್ನುತ್ತಿದ್ದ. ಕೊನಿಗೆ ಶೇಕ್ರಗ ಒಳಮನ್ಯಾಕ ಹೋಗಾಕ ಇಷ್ಟಾಗಲಿಲ್ಲ. ಅಲ್ಲೇ ಚಪ್ಪರದಾಗ ಸಿಕ್ಕಿಸಿದ್ದ ಮಚ್ಚಿನ ಕುಡುಗೋಲು ತಗಂದು ಮತ್ತೆ ಎರೆದಾರಿ ಹಿಡಿದ. ಮನಿಗೆ ಬಂದು ಮತ್ತೆ ಹೋಗದನ್ನ ನೋಡಿದ ರಾಗಪ್ಪ ಎಲ್ಲಿಗೆ ಅಂತನೂ ಕೇಳಲಿಲ್ಲ. ರೊಟ್ಟಿ, ಬದ್ನಿಕಾಯಿ ಸುಳಿಮಾಡಿಕೊಂಡು ಗುರ್ ಗರ್‍ರಂತ ತಿನ್ನತೊಡಗಿದ.

ಮುಂಜಮುಂಜಾಲೆ ಕಳ್‌ದ್ಯಾವನ ಕೂಡ ಬ್ಯಾಟಿ ಆಡೋ ಗೆಳೆಯರಾದ ಡೂಗೀರ, ಬಂಡೆಪ್ಪ ಜಾಲ್ಯಾಗ, ಗೊರಬಿನ್ಯಾಗ ಸುತ್ತಾಡುತ್ತ ಮೊಲ ಸಿಕ್ರ ಮೊಲ, ಉಡ ಸಿಕ್ರ ಉಡಂತ ಹಿಡಿದಾಡಕ ಓಡಾಡತೊಡಗಿದ್ರು. ಶೇಕ್ರ ಕುಡುಗೋಲು ತಗಂದು ಇವರಿಬ್ರ ಹತ್ತಿರಕ ಹೋಗುತ್ತಿದ್ದಂಗ... ಶೇಕ್ರ ದೂರ ಇದಾನ ನಾವು ಮಾತಾಡೋದು ಕೇಳಿಸಲ್ಲ ಅನ್ನೋ ನಂಬಿಕೆಮ್ಯಾಲ, 'ಶೇಕ್ರನ ಹೆಣ್ತಿ ಪಿಂಜಿ ಬೆಂಗಳೂರಾಗ ಮನೆಮನೆ ತಿರಿಗಿ ಕಸಮುಸ್ರಿ ಕೆಲ್ಸದಾಗ ಸೇರಿದಾಕಿ, ಹಂಗ ನಾಕ್ರುಪಾಯಿ ಆಸಿ ಸಲುವಾಗಿ ಮನಿಓನರ್ ಜತಿ ಮಕ್ಕಂದು ಬರುತ್ತಿದ್ಲಂತ... ಈ ಸುದ್ದಿ ರಾಗಪ್ಪಗ ಗೊತ್ತಾಗಿನೇ ಈ ಸೂಳೆ ಬೆಂಗಳೂರಾಗಿದ್ರ ಪೂರ ಮೈ ಮಾರಿಕೊಂಡು ನಮ್ ಮಾನಮರ್‍ಯಾದಿ ಕಳದು ಬಿಡ್ತಾಳಂತ ಯಾರಿಗೆ ಗೊತ್ತಾಗದಂಗ ಊರಿಗೆ ಕರಿಸಿಕೊಂಡು, ಈಗ ಸೊಸಿ ಕೂಡ ಚಲ್‌ಚಲೋದು ಮಾಡಿಸಿಕೊಂಡು ಮನ್ಯಾಗ ಸೊಸಿನ ಕಾಯಿಕೋತ ಕೂತಾನ... ಪಿಂಜಿ